


## ಕನ್ನಡದ ಹಿರಿಮೆ

‘ಡಿಜಿಟಲ್ ಯುಗದೊಳ್ ಕನ್ನಡದ ಬಾಳ್’, ನವೆಂಬರ್ 7ರ ಸಂಚಿಕೆಯಲ್ಲಿ ಪ್ರಕಟವಾದ ಮುಖಪುಟ ಲೇಖನ (ಗಣೇಶ್ ವೈದ್ಯ/ ಗುರುಪ್ರಸಾದ್ ಕಾಗಿನೆಲೆ) ಸಂದರ್ಭೋಚಿತವಾಗಿತ್ತು. ಕನ್ನಡ ಭಾಷೆಯ ಬಗ್ಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ಅನುಭವಿಗಳ ಅನಿಸಿಕೆಗಳು ಕೂಡ ಆಪ್ತವಾಗಿದ್ದವು. ಕನ್ನಡ ಭಾಷೆಯ ಹಿರಿಮೆ–ಪ್ರೌಢಿಮೆಗಳು ಓದುಗರಿಗೆ ತಲುಪಲು ‘ಸುಧಾ’ ನಡೆಸಿದ ಪ್ರಯತ್ನ ಅಭಿನಂದನಾರ್ಹ.

— ನಾ.ಕು. ಗಣೇಶ್, ಬೆಂಗಳೂರು

## ಕನ್ನಡ ಪುಸ್ತಕ ಪ್ರಪಂಚ ಡಿಜಿಟಲ್!

ಇಂದಿನ ಡಿಜಿಟಲ್ ಕಾಲದಲ್ಲಿ ಕನ್ನಡ ಭಾಷೆ ಉಳಿದು ಬೆಳೆಯಬೇಕಾದರೆ ಹೊಸ ದಾರಿಗಳತ್ತ ಹೊರಳಬೇಕಾದ ಅವಶ್ಯಕತೆಯ ಕುರಿತು ಲೇಖನ ಬೆಳಕು ಚೆಲ್ಲಿದೆ. ಈಗಾಗಲೇ ನಡೆದಿರುವ ಹಲವು ಪ್ರಯತ್ನಗಳ ವಿವರವನ್ನು ತುಂಬಾ ಚೆನ್ನಾಗಿ ವಿಶ್ಲೇಷಿಸಲಾಗಿದೆ.

‘ಬುಕ್ ಬ್ರಹ್ಮ’ ನುಡಿ ಋತುವಿನ ಸನ್ಮಾನ, ಗಣಕ ಪರಿಷತ್‌ನ ಕನ್ನಡ ಸರಳ ಕೀಲಿಮನೆ, ಹೀಗೆ ಹಲವು ಹೊಸ ಆವಿಷ್ಕಾರಗಳು ಕನ್ನಡದ ಪುಸ್ತಕ ಪ್ರಪಂಚವನ್ನು ಡಿಜಿಟಲ್‌ನತ್ತ ಸಾಗಿಸುವ ಪ್ರಯತ್ನ ಹೇಗೆ ನಡೆದಿದೆ ಎಂಬುದನ್ನು ವಿವರಿಸಿದೆ. ಚಿಂತನಾರ್ಹ ಬರಹ.

— ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ವಿಶ್ಲೇಷಣೆ ಚೆನ್ನಾಗಿದೆ

‘ಭ್ರಮೆ ಕಳಚಿದ ಫಲಿತಾಂಶ’, ನವೆಂಬರ್ 7 ಸಂಚಿಕೆಯ ‘ನಿಮ್ಮೊಡನೆ’ಯಲ್ಲಿ ಎನ್. ಉದಯ ಕುಮಾರ್ ಅವರು ಮಹಾರಾಷ್ಟ್ರ ಹಾಗೂ ಹರಿಯಾಣ ವಿಧಾನಸಭೆಗಳ ಫಲಿತಾಂಶಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವಿಶ್ಲೇಷಣಾತ್ಮಕವಾಗಿ ಮಂಡಿಸಿದ್ದಾರೆ. ಬದಲಾವಣೆ ಎಂಬುದು ಪ್ರಕೃತಿಯ ಸಹಜ ನಿಯಮ. ಇದಕ್ಕೆ ಮತದಾರನೇನೂ ಹೊರತಲ್ಲ.

— ಅರವಿಂದ ಜಿ. ಜೋಷಿ, ಮೈಸೂರು, ಎಚ್. ಆನಂದಕುಮಾರ್, ಚಿತ್ರದುರ್ಗ

## ಮಾರಯ್ಯನವರ ಪ್ರಯೋಗ

‘ವಿಚಾರ ಲಹರಿ’ಯಲ್ಲಿ (ಅಮೃತಮತಿ) ಶಿವಶರಣ ಕನ್ನಗತ್ತಿ ಮಾರಯ್ಯನವರ ಕುರಿತು ಹೇಳುವಾಗ ಮಾರಯ್ಯನವರ ನಿಲುವು ಸಮಾಜದ ಅಥವಾ ವ್ಯಕ್ತಿಯ ನೈತಿಕತೆಯನ್ನು ಪ್ರಶ್ನಿಸುವ ಕುರಿತು ಹೇಳಿದ್ದಾರೆ. ಉಳ್ಳವರಿಂದ ಕದ್ದು ಬಡವರಿಗೆ ಹಂಚಿ ಶಿವನ ಸ್ಮರಣೆಯನ್ನು ತನ್ನ ಕಳ್ಳತನದ ಕಾಯಕದಲ್ಲಿ ಮಾಡಿ ಎದೆತಟ್ಟಿ ಹೇಳುವ ಮಾರಯ್ಯನವರು ಪ್ರಯೋಗ ಮೆಚ್ಚುವಂತದ್ದು.

— ದೆಗ್ಗನಹಳ್ಳಿ ಆನಂದ್, ಕೆ.ಆರ್. ನಗರ

## ಹೆತ್ತವರಿಗೆ ಉಪಯುಕ್ತ

ಪರಮೇಶ್ವರಯ್ಯ ಸೊಪ್ಪಿಮಠ ಅವರ ‘ಮಗುವಿನ ಮನಸು ಅದೆಷ್ಟು ಸೊಗಸು!’, ಲೇಖನ ಈಗಿನ ತಂದೆ ತಾಯಂದಿರಿಗೆ ತುಂಬ ಉಪಯುಕ್ತವಾಗಿದೆ. ಇಬ್ಬರು ದುಡಿಯುವ ಈ ಕಾಲದಲ್ಲಿ ಹೆತ್ತವರಿಗೆ ಮಕ್ಕಳನ್ನು ಯಾಂತ್ರಿಕವಾಗಿ ಬೆಳೆಸುತ್ತಾರೆ. ನಾನು ವಿಶ್ರಾಂತ ಜೀವನವನ್ನು ಪ್ರಾರಂಭಿಸಿದ ಮೇಲೆ ನನ್ನ ಒಂದೂವರೆ ವರುಷದ ಮೊಮ್ಮಗುವಿನ ಜೊತೆ ಬಹಳ ಸಮೀಪದಿಂದ ಕಾಲ ಕಳೆದಿದ್ದೇನೆ. ಮಗು ಮನಸ್ಸು ತುಂಬ ಕೋಮಲ. ಚಿಕ್ಕ ವಯಸ್ಸಿನಲ್ಲಿ ಅದನ್ನು ಒಂದು ಶಿಲ್ಪದ ರೀತಿಯಲ್ಲಿ ಕೆತ್ತಬಹುದು. ನಾವು ಮಕ್ಕಳ ಹಾಗೆ ಅವರಿಗೆ ಸ್ಪಂದಿಸಬೇಕು.

—ಮಾಧವ ಉದ್ಯಾವರ, ಮೈಸೂರು

—ಜೆ. ಪ್ರದೀಪಕುಮಾರ, ಹೂವಿನಹಡಗಲಿ

## ಪುಸ್ತಕಗಳು ಎಲ್ಲರಿಗೂ ಲಭಿಸಲಿ

‘ಪುಸ್ತಕ ರಾಶಿ– ಕಾಶಿ’ (ನಾ. ಕಾರಂತ ಪೆರಾಜೆ) ಲೇಖನ ಪುಸ್ತಕಪ್ರಿಯರ ಗಮನಸೆಳೆಯುವಂತಿದೆ.



ಕನ್ನಡದ ಕಿಂಕರ ಪಾಂಡವಪುರದ ‘ಪುಸ್ತಕ ಮನೆ’ಯ ರೂವಾರಿ ಅಂಕೇಗೌಡರು ಕಷ್ಟಪಟ್ಟು ಸಂಗ್ರಹಿಸುತ್ತಿರುವ ಲಕ್ಷಗಟ್ಟಲೆ ಪುಸ್ತಕಗಳು ಮುಂದಿನ ಪೀಳಿಗೆಗೂ ಉಪಯೋಗವಾಗಬೇಕು, ಸದ್ಯ ವ್ಯವಸ್ಥಿತವಾಗಿ ಇಟ್ಟಿಲ್ಲದ ಇವರ ಪುಸ್ತಕಗಳನ್ನು ದಾನಿಗಳು ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದೆ ಬಂದು ವ್ಯವಸ್ಥಿತವಾಗಿ ಇರಿಸಿ ಸಾರ್ವಜನಿಕರ ಉಪಯೋಗಕ್ಕೆ ತೆರೆಯುವಂತಾಗಬೇಕು. ಅಂಕೇಗೌಡರ ಶ್ರಮ ನಿಜಕ್ಕೂ ಶ್ಲಾಘನೀಯ.

—ನಾರಾಯಣ ಯಾಜಿ ಶಿರಾಲಿ

## ಪುಸ್ತಕ ರಾಶಿ- ಅಭಿನಂದನೆ

ಪುಸ್ತಕ ಮನೆಯಲ್ಲಿ ಹತ್ತು ಲಕ್ಷಕ್ಕೂ ಮಿಕ್ಕಿದ ಪುಸ್ತಕಗಳನ್ನು ಹೊಂದಿರುವ, ಹಿರಿಯ ಕವಿ ಚೆನ್ನವೀರ ಕಣವಿಯವರ ಶ್ಲಾಘನೆಗೆ ಪಾತ್ರರಾಗಿರುವ, ತನ್ನ ಪುಸ್ತಕ ಪ್ರೇಮದಿಂದ ಲಿಮ್ಕಾ ಗೌರವಕ್ಕೆ ಭಾಜನರಾಗಿರುವ ಪುಸ್ತಕ ಕಾಶಿಯ ಅಂಕೇಗೌಡರಿಗೆ ಅಭಿನಂದನೆಗಳು.

— ಪಿ. ಜಯವಂತ ಪೈ, ಕುಂದಾಪುರ



## ಜೀವನದ ವಾಸ್ತವತೆ ಸಾರುವ ಕಥೆ

‘ಓಟ’, ಮಂಜುನಾಯಕ ಚಳ್ಳೂರ ಅವರ ವಿಶೇಷ ಕಥೆ ನಾನು ಇತ್ತೀಚೆಗೆ ಓದಿದ ಅತ್ಯುತ್ತಮ ಕತೆಗಳಲ್ಲೊಂದು. ಕಥೆಯಲ್ಲಿನ ಭಾಷೆ, ಪಾತ್ರಗಳ ವರ್ತನೆ, ಕಥೆ ಹರಿಯುವ ರೀತಿ ನಾಟಕೀಯತೆಯ ಎಳೆಯೂ ಇಲ್ಲದೆ ಸಹಜವಾಗಿದೆ. ಪಾತ್ರಗಳು ತಮ್ಮ ಸಮಸ್ಯೆಯಿಂದ ಓಡಿ ಮತ್ತೊಬ್ಬರನ್ನು ಓಡಿಸಿಕೊಂಡು ಹೋಗುವ, ಓಡುವಂತೆ ಪ್ರೇರೇಪಿಸುವ ಪ್ರಕ್ರಿಯೆ ಜೀವನದ ವಾಸ್ತವ.

— ಮಂಜುನಾಥ್ ಎಚ್.ಸಿ., ರಾಜೀವ್ ಕುಮಾರ ಮಂಚಿ

## ಕಥೆಯ ಅಸ್ಮಿತೆ

‘ಓಟ’ ವಿಶೇಷ ಕಥೆ ಗ್ರಾಮೀಣ ಪ್ರದೇಶದ ಸೊಗಡಿಗೆ ಹಿಡಿದ ಕನ್ನಡಿಯಂತಿದೆ. ಕಥೆಯನ್ನು ಓದುತ್ತಿದ್ದರೆ ಗ್ರಾಮೀಣ ಪ್ರದೇಶದ ಅದೊಂಥರದ ಲಹರಿ ಕಿವಿಗೆ ಕೇಳುತ್ತಿತ್ತು. ಕೆಲವೆಡೆ ಬರವಣಿಗೆ ಹಿತವೆನಿಸದ ಪ್ರಕಟಣೆಗೆ ಯೋಗ್ಯವೆನಿಸಿದ ಪದ ಬಳಕೆ ಆಗಿದ್ದರೂ ಅದೂ ಈ ಕಥೆಯ ಅಸ್ಮಿತೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅಗತ್ಯವಾಗಿತ್ತು.

—ವೀರಭದ್ರ ಎಂ., ಬೆಂಗಳೂರು

## ಖೇದವೆನಿಸಿತು

ಹೊರ ರಾಜ್ಯದಲ್ಲಿರುವ ನಾನು ಈ ಸಲ ಊರಿಗೆ ಹೋದಾಗ, ತುಂಬಾ ಸಮಯದ ನಂತರ ' ಸುಧಾ ' ಓದುವ ಅವಕಾಶ ಸಿಕ್ಕಿತು. ಖುಷಿಯಿಂದ ಓದತೊಡಗಿದವಳಿಗೆ ಸ್ವಲ್ಪ ಹೊತ್ತಿನಲ್ಲೇ ತುಂಬಾ ಬೇಸರವಾಯಿತು. ಕಥೆಯಲ್ಲಿ ಅಸಹ್ಯ ಎನಿಸುವ ಭಾಷೆ, ಅಶ್ಲೀಲ ಬೈಗುಳ ತುಂಬಿದ್ದು, ‘ಸುಧಾ’ದಲ್ಲಿ ಇಂಥ ಕೆಳಮಟ್ಟದ ಕಥೆ ಪ್ರಕಟವಾದದ್ದು ಖೇದವೆನಿಸಿತು.

—ಚಿತ್ರಾ, ವಿಂಧ್ಯಾ ನಾಗರಾಜ್ ಬೆಂಗಳೂರು

‘ಓಟ’ ಕಥೆಯಲ್ಲಿ ಉದ್ದೇಶಪೂರ್ವಕವಾಗಿ ಅಶ್ಲೀಲ ಶಬ್ದಗಳನ್ನು ತುರುಕಿದಂತಿದೆ. ಇದರಿಂದ ವಾಚಾಳಿತನ ಜಾಸ್ತಿಯಾಗಿ ಕತೆಯು ಸೊರಗಿತು.

—ಪಿ.ಬಿ. ಪ್ರಸನ್ನ, ಮಂಗಳೂರು